International Journal of Kannada Research 2021; 7(3): 91-94

International Journal of Kannada Research
www.kannadajournal.com

ISSN: 2454–5813
IJKR 2021; 7(3): 91-94
© 2021 IJKR
www.kannadajournal.com
Received: 03-05-2021
Accepted: 12-06-2021

**ಲಕ್ಷ್ಮನಾಯ್ಕ**
ಪಿಎಚ್‌ಡಿ ಸಂಶೋಧನಾ
ವಿದ್ಯಾರ್ಥಿ ಅಭಿವೃದ್ಧಿ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ, ಕರ್ನಾಟಕ, ಭಾರತ

**ಡಾ.ನಾರಾಯಣಮ್ಮ ಪಿ.ಎನ್.**
ಸಹ ಪ್ರಾಧ್ಯಾಪಕರು,
ಅರ್ಥಶಾಸ್ತ್ರ ವಿಭಾಗ, ಸರ್ಕಾರಿ
ಪ್ರಥಮ ದರ್ಜೆ ಕಾಲೇಜು,
ಮಲ್ಲೂರು, ಕೋಲಾರ,
ಕರ್ನಾಟಕ, ಭಾರತ

**Corresponding Author:**
**ಲಕ್ಷ್ಮನಾಯ್ಕ**
ಪಿಎಚ್‌ಡಿ ಸಂಶೋಧನಾ
ವಿದ್ಯಾರ್ಥಿ ಅಭಿವೃದ್ಧಿ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ, ಕರ್ನಾಟಕ, ಭಾರತ

# ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಆರ್ಥಿಕ ಸ್ಥಿತಿಗತಿ

**ಲಕ್ಷ್ಮನಾಯ್ಕ, ಡಾ.ನಾರಾಯಣಮ್ಮ ಪಿ.ಎನ್.**

ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಮೂಲತಃ ಗುಡ್ಡಗಾಡು ಪ್ರದೇಶದ ವಾಸಿಗಳಾದ ಲಂಬಾಣಿಗಳು ಆರ್ಥಿಕ ಹಿನ್ನಲೆಯಲ್ಲಿ ಇದ್ದು ಬುಡ್ಡಕಟ್ಟು ಜನಾಂಗಕ್ಕೆ ಸೇರಿದವರಾಗಿದ್ದು ಇವರು ತಮ್ಮ ಸಂಸ್ಕೃತಿಯನ್ನು ಬಿಟ್ಟು ಬಿಡದೇ ಉಳಿಸಿ ಬೆಳಸಿಕೊಂಡು ಭದ್ರವಾಗಿ ಕಾಯ್ದು ಕೊಂಡಿದ್ದಾರೆ. ಲಂಬಾಣಿಗಳ ಆರ್ಥಿಕ ಸ್ಥಿತಿಯಲ್ಲಿ ಹಿಂದುಳಿದಿದ್ದು ಅವರ ಚೌಕಟ್ಟಿನಲ್ಲಿ ಜೀವನ ನಡೆಸುತ್ತಿದ್ದಾರೆ. ಇವರ ಸಂಸ್ಕೃತಿಕ ಕಲೆ ಮುಂತಾದ ಅನೇಕ ಅಂಶಗಳಿಂದ ಈ ಜಿಲ್ಲೆಯ ಲಂಬಾಣಿಗರು ಭಾರತೀಯ ಸಂಸ್ಕೃತಿಗೆ ಮೆರುಗು ಗೋಳಿಸಿದ್ದಲ್ಲದೆ ಇಲ್ಲಿ ವಾಸವಾಗಿರುವ ಲಂಬಾಣಿಗರು ಜನರಿಗೆ ಆರ್ಕಷಿತವಾದ ಸಂಪ್ರದಾಯಿಕ ಕಸೂತಿಯಿಂದ ಕೊಡಿದ ಬಣ್ಣ ಬಣ್ಣದ ಬಟ್ಟೆಯುಟ್ಟು ಹಾಗೂ ಆಭರಣಗಳನ್ನು ತೊಟ್ಟು ಲಂಬಾಣಿ ಸ್ತ್ರೀಯರನ್ನು ಗಮನಿಸಿದ್ದಾರೆ. ಆದರೆ ಇತ್ತೀಚಿನ ತಂತ್ರಜ್ಞಾನಕ್ಕೆ ತಕ್ಕಂತೆ ಹೊಸ ಹೊಸ ಮಾದರಿಯ ವಸ್ತ್ರಗಳನ್ನು ಉಪಯೋಗಿಸುವುದನ್ನು ಕಲಿಯುತ್ತಿದ್ದಾರೆ. ಏಕೆಂದರೆ ಲಂಬಾಣಿಗರ ವಸ್ತ್ರಗಳ ಕಚ್ಚಾ ವಸ್ತುಗಳಿಗೆ ಬೆಲೆ ಜಾಸ್ತಿಯಾಗುತ್ತಿದ್ದು, ಅವುಗಳನ್ನು ಖರೀದಿಸಲು ಮತ್ತು ಸಮಯದ ಅಭಾವದಿಂದ ಲಂಬಾಣಿಗರ ಉಡುಗೆ–ತೊಡುಗೆ ತಯಾರಿಸಿಕೊಳ್ಳಲು ಆಗುತ್ತಿಲ್ಲ, ಲಂಬಾಣಿಗರು ತಮ್ಮ ಪೂರ್ವಾಜರು ನಡೆಸಿಕೊಂಡ ಬಂದಿರುವ ಉಡುಗೆಯನ್ನು ಕಡಿಮೆ ಮಾಡಬಾರದು. ಪಾರಂಪಾರಿಕವಾಗಿರುವ ಈ ಕಲೆಯನ್ನು ಮುಂದಿನ ಪೀಳಿಗೆಯವರು ಉಳಿಸಿಕೊಂಡರೆ ಲಂಬಾಣಿಗರ ಇತಿಹಾಕ್ಕೆ ಒಂದು ಘನತೆ.

ಲಂಬಾಣಿಗರು ವಾಸಿಸುವ ಪ್ರದೇಶ ಹಾಗೂ ನಾಗರಿಕತೆ, ಅವರ ಪರಂಪರೆಯ ಸಾಂಪ್ರಾದಾಯಿಕ ಇತಿಹಾಸ, ಅವರ ಅಂತರಿಕ ಸಮಾಜ ರಚನೆ ಕಸುಬು, ಕಲೆ, ಸಾಮಾಜಿಕ ಸ್ಥಾನಮಾನಗಳು. ಲಂಬಾಣಿಗಳು ವೇಷ– ಭೂಷಣಗಳು ಆಹಾರ ಪಾನಿಯ ಪದ್ಧತಿಗಳು ಹಾಗೂ ಹವ್ಯಾಸಗಳು ಇತ್ಯಾದಿಗಳನ್ನು ಗಮನಿಸಬೇಕಾಗುತ್ತದೆ. ಇದಲ್ಲದೆ ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಆರ್ಥಿಕ ಅನೇಕ ಅಂಶಗಳನ್ನು ನಾನು ಶೋಧಿಸಬೇಕು ಎಂಬ ಆಸೆಯಿಂದ ಕೆಲವು ನನ್ನದೇ ಆದ ಉದ್ದೇಶಗಳನ್ನು ಇಟ್ಟುಕೊಂಡು ಅಧ್ಯಯನ ಕೈಗೊಂಡಿರುತ್ತೇನೆ. ಅವುಗಳು ಈ ಕೆಳಗಿನಂತಿವೆ.

## ಲಂಬಾಣಿಗಳ ಆರ್ಥಿಕ ಸ್ಥಿತಿಗತಿ

೧. ಆದಾಯ
೨. ಬಡತನ
೩. ಜೀವನ ಮಟ್ಟ
೪. ಮಹಿಳೆಯರ ಪಾಲ್ಗೊಳ್ಳುವಿಕೆ
೫. ನೈರ್ಮಲ್ಯ
೬. ಉದ್ಯೋಗ

1. **ಆದಾಯ:**–ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಆರ್ಥಿಕ ಸ್ಥಿತಿಗತಿ ಬಗ್ಗೆ ಹೇಳುವುದಾದರೆ ಇವರಿಗೆ ಒಂದೇ ರೀತಿಯಿಂದ ಆದಾಯ ಬರುವುದಿಲ್ಲ. ನಾನಾ ರೀತಿಯಾಗಿ ಆದಾಯ ಪಡೆಯುತ್ತಾರೆ, ಕಾರಣ ಗುಡ್ಡಗಾಡು ಪ್ರದೇಶದಲ್ಲಿ ಹಾಗೂ ಕಾಡುಗಳಲ್ಲಿ ಕಟ್ಟಿಗೆ ಕಡಿದುಕೊಂಡು ಬಂದು ಪಟ್ಟಣಗಳಿಗೆ ಅಥವಾ ಊರಿಂದ ಊರಿಗೆ ಹೋಗಿ ಕಟ್ಟಿಗೆ ಮಾರುವುದರಿಂದ, ಕಾಡಿನ ಹಣ್ಣುಗಳಾದ ಕವಳೆಕಾಯಿ, ಕಾರೆಹಣ್ಣು, ಬಿಕ್ಕೆಹಣ್ಣು ಬಾರೆಹಣ್ಣು, ಲೋಳೆಹಣ್ಣುಗಳನ್ನು ಮಾರಾಟ ಮಾಡುವುದರಿಂದ, ಕಟ್ಟಡಗಳಲ್ಲಿ ಗಾರೆ, ಮೇಸ್ತ್ರಿ, ಈ ರೀತಿಯ ಕೂಲಿ ಕೆಲಸ ಮಾಡುವುದರಿಂದ,

ಲಂಬಾಣಿಗಳ ಉಡುಪು ತಯಾರಿಕೆಯ ಕಚ್ಚಾ ವಸ್ತುಗಳನ್ನು ಮಾರುವುದರಿಂದ, ಲಂಬಾಣಿ ಹೆಣ್ಣು ಮಕ್ಕಳ ವಿವಿಧ ಬಗೆಯ ಉಡುಪುಗಳನ್ನು ಕೈಯಿಂದ ಪೋಣಿಸಿ ವಿನ್ಯಾಸಗೊಳಿಸುವುದು ವಸ್ತ್ರಗಳ ಮೇಲೆ ಉಣ್ಣೆಯ ದಾರದಿಂದ ಚಿತ್ತಾರ ಬಿಡಿಸುವುದು, ಬ್ಯಾಗು(ಚೀಲ)ಗಳನ್ನು ತಯಾರಿಸುವುದು ಟೋಪಿಗಳನ್ನು ತಯಾರಿಸುವುದು, ಇವುಗಳೆಲ್ಲವನ್ನೂ ಕ್ರೂಡೀಕರಿಸಿಕೊಂಡು, ನಗರ,ಪಟ್ಟಣ ಹಾಗೂ ಐತಿಹಾಸಿಕ ಪ್ರದೇಶಗಳಲ್ಲಿ (ಅಂದರೆ ದೇವಸ್ಥಾನ, ಡ್ಯಾಂ, ಉದ್ಯಾನವನ ಈ ರೀತಿ ಸ್ಥಳಗಳಲ್ಲಿ) ಮಾರಾಟ ಮಾಡಿ ಆದಾಯ ಪಡೆಯುತ್ತಾರೆ.

2. **ಬಡತನ:–** ಬಳ್ಳಾರಿ ಜಿಲ್ಲೆಯ ಲಂಬಾಣಿಯವರು ಬಡತನದಲ್ಲಿಯೇ ಹೆಚ್ಚಾಗಿ ಇರುವರು ಇವರು ಜೀವನೋಪಾಯಕ್ಕೆ ಹೆಚ್ಚಾಗಿ ಕೃಷಿ ಮತ್ತು ಮೇಯಿಸುವಿಕೆಗಳನ್ನು ಅವಳವಡಿಸಿಕೊಂಡಿದ್ದರು ಜೊತೆಗೆ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುತ್ತಿದ್ದರು, ಏಕೆಂದರೆ ಹೊಸ ಹೊಸ ರೀತಿಯಲ್ಲಿ ಬದುಕಿನ ದುಡಿಮೆ ಕಂಡು ಕೊಂಡಿರಲಿಲ್ಲ, ಅವರ ನಿತ್ಯದ ದುಡಿಮೆ ಆ ದಿನಕ್ಕೆ ಮಾತ್ರ ಇರುತ್ತಿತ್ತು. ನಾಳೆಯವರೆಗೂ ಅವರು ಯೋಚಿಸುತ್ತಿರಲಿಲ್ಲ, ಪ್ರತಿ ದಿನ ಏನು ಕೆಲಸಕ್ಕೆ ಹೊಗುತ್ತಿದ್ದರೋ ಆ ಕೆಲಸದ ನಂತರ ಬೇರ ಯಾವುದರ ಬಗ್ಗೆ ಯೋಚಿಸುತ್ತಿರಲಿಲ್ಲ, ಬಡತನ ಸಮಾಜದ ಬಹುದೊಡ್ಡ ವರ್ಗಕ್ಕೆ ದಾಖಲಿಸುವ ಪರಿಣಿತಿ ಹಾಗೂ ಅವಕಾಶಗಳನ್ನು ನೀಡಿಲ್ಲ, ಇದರಿಂದಾಗಿ ಸಮಾಜದ ತಳಸ್ಥರದ ಜನರು ತಮ್ಮ ಅನುಭವಗಳನ್ನು ದಾಖಲಿಸುವ ಸ್ಥಿತಿಯಲ್ಲಿಲ್ಲ. ಇವರ ಅನುಭವಗಳನ್ನು ಇವರ ಬದುಕಿನಿಂದ ದೂರ ಇರುವವರು ದಾಖಲಿಸುತ್ತಾರೆ. ಹೆಚ್ಚು ಮೇಲ್ವರ್ಗಗಳ ಅನುಭವ ಹಾಗು ಆದ್ಯತೆಗಳನ್ನು ಪ್ರತಿಬಿಂಬಿಸುತ್ತಿವೆ. ಅವರದ್ದೆ ಆದ್ಯತೆಗಳ ಮೇಲೆ ಗಮನ ಹರಿಸಿದಂತೆ, ಲಂಬಾಣಿ ಜನಗಳಿಗೆ ಸಂಸ್ಥೆ, ಮೌಲ್ಯಗಳ ನಡುವೆ ಕಟ್ಟಿಕೊಡುವ ಸಂಬಂಧವಿಲ್ಲ, ತಳಸ್ತರದ ಜನರ ಬದುಕು ಬವಣೆ ಹೇಳುವ ಸತ್ಯಗಳಿಂದ ಎಷ್ಟು ದೂರ ಅಥವಾ ಹತ್ತಿರ ಇದೆಯೆಂದು ನೋಡಲು ಬಳಕೆಯಾಗುತ್ತಿದ್ದಾರೆ.

3. **ಜೀವನ ಮಟ್ಟ :–** ಲಂಬಾಣಿಯವರು ಸಾಮಾನ್ಯವಾಗಿ ಊರುಗಳಿಂದ ದೂರದಲ್ಲಿ ಕಾಡುಮೇಡುಗಳಲ್ಲಿ ತಮ್ಮದೇ ಆದ ಗುಂಪುಗಳಲ್ಲಿ ವಾಸಿಸುತ್ತಾರೆ. ತಮ್ಮ ಸ್ವಚ್ಛಂದವಾದ ಬದುಕಿಗೆ ಗ್ರಾಮ ಸಮುದಾಯದ ನಿಬಂಧನೆಗಳು ಹಾಗೂ ಕಟ್ಟಳೆಗಳು ಅನ್ವಯವಾಗದಂತೆ ಆದಷ್ಟು ದೂರದಲ್ಲಿ ಪ್ರತ್ಯೇಕವಾಗಿಯೇ ನೆಲೆಯಾಗುತ್ತಾರೆ. ಅವರ ಸಮೂಹಗಳಲ್ಲಿ ನಡೆಯುವ ಪ್ರತಿಯೊಂದು ಪೂಜೆ, ಪುನಸ್ಕಾರ, ಮದುವೆ, ಮುಂಜಿ ಹಾಗೂ ಇನ್ನಿತರ ಯಾವುದೇ ಕಾರ್ಯಗಳಲ್ಲಿ ಇವರಿಗೆ ಮಹತ್ವದ ಸ್ಥಾನಮನಗಳಿರುತ್ತವೆ. ಕುಟುಂಬದ ಪ್ರತಿಯೊಂದು ಆಗು ಹೋಗುಗಳನ್ನು ಪುರುಷರೇ ನಿರ್ವಹಿಸಿಕೊಂಡು ಹೋಗುತ್ತಾರೆ. ಸಮಾಜದಲ್ಲಿ ಮಾನ ಮರ್ಯಾದೆ ಹಾಗೂ ಆತ್ಮಗೌರವದ ಪ್ರಜ್ಞೆ ಸದಾ ಜಾಗೃತವಾಗಿರುತ್ತದೆ.

4. **ಮಹಿಳೆಯರ ಪಾಲ್ಗೊಳ್ಳುವಿಕೆ:**

ಲಂಬಾಣಿಯ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳುವಿಕೆಯ ಕಾರ್ಯಕ್ರಮಗಳು:

**ಮೈ ನೆರೆತಾಗ**
**ಕನ್ಯೆ ನೋಡುವ ಕಾರ್ಯಕ್ರಮ– (ಚೋರಿನಾ ದೇಖರೋ)**
**ನಿಶ್ಚಿತಾರ್ಥ ಕಾರ್ಯಕ್ರಮ–(ಸಗಾಯ್ ಕರೆರೋ)**
**ಸುರಿಗೆ ಸುತ್ತುವ ಕಾರ್ಯಕ್ರಮ– (ಘೋರಣೊ ಬಾಂಧೇರೋ)**
**ಮದುವೆಯ ಕಾರ್ಯಕ್ರಮ_(ವಿಯಾ ಕರಾಯರೋ)**
**ಸಪ್ತಪದಿ/ಮಾಂಗಲ್ಯಧಾರಣ ಕಾರ್ಯಕ್ರಮ–(ತಾಳಿ ಬಂದಾಯಿರೋ)**
**ತೊಟ್ಟಿಲ ಕಾರ್ಯಕ್ರಮ–(ತೋಟ್ಟಲ ಮೇಲೆರೋ)**
**ಜನಿಸಿದ ಮಗುವಿನ ಕೂದಲು ತೆಗೆಯುವ ಕಾರ್ಯಕ್ರಮ–(ಚೋರಾರೊ ಲಟ್ಟ ಲೇರೋ)**

5. **ನೈರ್ಮಲ್ಯ:–** ಲಂಬಾಣಿಯವರಿಗೆ ಗುಡಿಸಿನಲ್ಲಿ ವಾಸಿಸುವವರು ನೆಲಕ್ಕೆ ಕೆಂಪುಮಣ್ಣು, ಸಗಣಿಯನ್ನು ಕಲಿಸಿ ಗೋಡೆಗಳಿಗೆ ಮೆತ್ತುತ್ತಿದ್ದರು, ನೆಲಕ್ಕೆ, ಹೊರಗಿನ ಜಗುಲಿ ಕಟ್ಟೆ, ಹಾಗೂ ಅಂಗಳಕ್ಕೆ ಸಹ ಈ ಮಿಶ್ರೀತ ಮಣ್ಣನ್ನು ಉಪಯೋಗಿಸುತ್ತಿದ್ದರು. ಇಂದಿಗೂ ಈ ಪದ್ಧತಿಯನ್ನು ಜನರು ಅನುಸರಿಸುತ್ತಿದ್ದು, ಬಯಲು ಬಹಿರ್ದೆಸೆ ಒಂದು ಸಾಮಾನ್ಯ ಸಮಸ್ಯೆ ಯಾಗಿತ್ತು. ಅದನ್ನು ಅವಮಾನ ಕರವೆಂದಾಗಲಿ, ಸ್ವಚ್ಛತೆಯ ಕೊರತೆಯಿಂದಾಗಲಿ ಎಂದೂ ಭಾವಿಸಿರಲಿಲ್ಲ. ಕೆಲವು ಕುಟುಂಬಗಳಲ್ಲಿ ಇಂದಿಗೂ ಶೌಚಾಲಯಗಳಿಲ್ಲ, ಬಯಲಿನಲ್ಲಿ ಮಲ ಮೂತ್ರ ವಿಸರ್ಜನೆ ಮಾಡುವುದು ಆನೇಕ ಖಾಯಿಲೆಗಳಿಗೆ ರಹದಾರಿಯಾಗುತ್ತೆಂದು ಕಸದ ತಿಪ್ಪೆಗಳಲ್ಲಿ ಇಲಿ, ಹೆಗ್ಗಣಗಳ ಸಂಖ್ಯೆ ಹೆಚ್ಚಿದಂತೆ ಕಸದ ರಾಶಿಯಲ್ಲಿ ಹೊರಳಾಡುವ ಹಂದಿ ನಾಯಿಗಳಂಥ ಪ್ರಾಣಿಗಳಿಂದ ದುರ್ವಾಸನೆ ಹರಡುತ್ತದೆ, ಇದರಿಂದ ಮರಣಾಂತಿಕ ರೋಗಗಳು ಹರಡುವ ಸಾಧ್ಯತೆ ಇರುತ್ತದೆ ಎನ್ನುವ ಸಣ್ಣ ಅಂಶವೂ ತಿಳಿದಿಲ್ಲ. ಕಸ–ಕಡ್ಡಿಗಳಾಗಲಿ ಮನೆಯಲ್ಲಿ ಉಳಿದ ಆಹಾರ ಪದಾರ್ಥ ಗಳಾಗಲಿ ಬೀದಿಯ ಕಸವೇ ಆಗಲಿ ಇದೆಲ್ಲವನ್ನು ದೂರದಲ್ಲಿ ಹಾಕುವುದರಿಂದ ನೈರ್ಮಲ್ಯ ಕಾಪಾಡಿಕೊಳ್ಳಬಹುದು ಎಂಬುವ ಅರಿವು ಇರಲಿಲ್ಲ. ನೈರ್ಮಲ್ಯವನ್ನು ಸಾಧಿಸುವ ಉದ್ದೇಶದಿಂದ ಸರ್ಕಾರದಿಂದ ಸವಲತ್ತು ಪಡೆದು ಪ್ರತಿ ಮನೆಗೆ ಒಂದು ಶೌಚಾಲಯ ಬಳಸುವುದು. ಗ್ರಾಮದ ಬೀದಿಗಳು, ಓಣಿಗಳು ಸ್ವಚ್ಛತೆಗೆ ಗಮನ ನೀಡುವುದನ್ನು ಕಲಿಯಬೇಕಾಗುತ್ತದೆ.

6. **ಉದ್ಯೋಗ:–**ಬಳ್ಳಾರಿ ಜಿಲ್ಲೆ ಲಂಬಾಣಿಗಳ ಅಲೆಮಾರಿ ಬುಡಕಟ್ಟು ಜನಾಂಗದವರಾಗಿ ಲಂಬಾಣಿಗಳು ಯಾವುದೇ ಸಾಂಪ್ರದಾಯಿಕ ಉದ್ಯೋಗವನ್ನು ಹೊಂದಿಲ್ಲ ಅವರ ಸ್ವಂತದ್ದು.ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಅಲೆಮರಿ ಬುಡಕಟ್ಟು ಜನಾಂಗದವರು ಇನ್ನು ಹೆಚ್ಚಿನ ಅಭಿವೃದ್ಧಿಯನ್ನು ಹೊಂದಬೇಕು. ಬಳ್ಳಾರಿ ಜಿಲ್ಲೆಯ ತಾಂಡಗಳ ಜನರು ಕೂಲಿ ಕೆಲಸ ಮಾಡುತ್ತಾ ಜೀವನವನ್ನು ಸಾಗಿಸುತ್ತಿದ್ದಾರೆ.ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಆರ್ಥಿಕ ಸ್ಥಿತಿಯನ್ನು ಅರಿಯುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಲಂಬಾಣಿಗಳು ಈ ಹಿಂದೆ ಯಾವ ರೀತಿಯಲ್ಲಿ ತಮ್ಮ ಆರ್ಥಿಕ ಜೀವನವನ್ನು ಕಟ್ಟಿಕೊಂಡಿದ್ದಾರೆ, ಈ ಕುರಿತು ಅವರು ಯಾವ ರೀತಿಯಲ್ಲಿ ಬದಲಾವಣೆಮಾಡಿಕೊಂಡಿದ್ದಾರೆ ಅವರ ಆರ್ಥಿಕ ಶೈಕ್ಷಣಿಕ ಮತ್ತು ಸಮಾಜಿಕ ಸ್ಥಿತಿಗತಿಯನ್ನು ಅರ್ಥೈಸಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ನಡೆಯುವ ಕಬ್ಬಿಣ ಮತ್ತು ಮ್ಯಾಗ್ನೀಶಿಯಮ್ ಗಣಿಗಾರಿಕೆಯಿಂದ ಔದ್ಯೋಗಿಕ ಚಟುವಟಿಕೆಗಳು ಹೆಚ್ಚಾಗಿ ಜರುಗುತ್ತಿದೆ, ಆದರೆ ವಿದ್ಯಾಭ್ಯಾಸದಲ್ಲಿ ತಾಂತ್ರಿಕ ಶಿಕ್ಷಣದ ಕೊರತೆ ವೃತ್ತಿ ಪ್ರಾವಿಣ್ಯತೆಯ ಕೊರತೆ ಇತ್ಯಾದಿ ಕಾರಣಗಳಿಗಾಗಿ ಜಿಲ್ಲೆಯ ಬಹುತೇಕ ಶಕ್ತಿ ಔದ್ಯೋಗಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದೆ ಹೊರಗೊಳಿಬೇಕಾಗಿದೆ.ಅಲ್ಲಿನ ಜನರು ಕೆಲಸ ಕಾರ್ಯಗಳಲ್ಲಿ ಬೇರೆ ಪ್ರದೇಶಗಳಿಗೆ ಹೋಗುತ್ತಾರೆ.

**ಲಂಬಾಣಿಗಳ ಸಾಮಾಜಿಕ ಸ್ಥಿತಿಗತಿ.**

೧. ಲಂಬಾಣಿ ಸಮುದಾಯ ಸಹಭಾಗಿತ್ವ
೨. ಶಿಕ್ಷಣ

೩. ಆರೋಗ್ಯ
೪. ಕುಟುಂಬ
೫. ಆಹಾರ ಪದ್ಧತಿ

1) **ಲಂಬಾಣಿ ಸಮುದಾಯ ಸಹಭಾಗಿತ್ವ:-** ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಕುಟುಂಬಗಳಲ್ಲಿ ಒಂದೇ ಕುಟುಂಬದಲ್ಲಿ 4-5 ಕುಟುಂಬ ಸದಸ್ಯರಿರುತ್ತಾರೆ. ಅವರದೂ ತುಂಬು ಕುಟುಂಬವಾಗಿರುತ್ತದೆ. ಜೊತೆಗೆ ಮದುವೆ ನಂತರ ಹೊರ ಹೋಗುವ,ಮತ್ತು ಒಳಬರುವ ಹೆಣ್ಣುಮಕ್ಕಳು(ಮಗಳು-ಸೊಸೆ) ಈ ಸಂಬಂಧಜೊತೆಗೆ ಹೊಸ ಹೊಸ ನೆಂಟಸ್ಥಿಕೆ ಬೆಳೆಯುತ್ತದೆ. ಈ ಹೊಸ ಹೊಸ ನೆಂಟಸ್ಥಿಕೆಯಿಂದ ಮನೆಯಲ್ಲಿ ಯಾವಾಗಲೂ ಜನರ ಗಲಾಟೆ ಇದ್ದೇ ಇರುತ್ತದೆ. ಊರಿನಲ್ಲಿ ನಡೆಯುವ ಜಾತ್ರೆ, ಹಬ್ಬ-ಹುಣ್ಣಿಮೆಗಳಂದು ಮನೆಗಳಲ್ಲಿ ಸಂಭ್ರಮವಿರುತ್ತದೆ. ಶೀತಲ(ಅಷಾಡ ಹಬ್ಬದಲ್ಲಿ ಸೇವಾಲಾಲ್ ಮತ್ತು ಮಾರೆಮ್ಮನ ಗುಡಿಯ ಹತ್ತಿರ ಎಲ್ಲಾ ವಯಸ್ಸಿನ ಹೆಣ್ಣುಮಕ್ಕಳು ಸುತ್ತುವರೆದು ಗುಂಪುಮಾಡಿ ಲಂಬಾಣಿ ಹಾಡು ಹಾಡುತ್ತಾ ಹಾಗೂ ನೃತ್ಯ ಮಾಡುತ್ತಾರೆ. ಶ್ರಾವಣ ಮಾಸದಲ್ಲಿ ಆಚರಿಸುವ (ನಾಗರ ಪಂಚಮಿ ಹಬ್ಬದಲ್ಲಿ ವಿಶೇಷವಾಗಿ ಊರಿನ ಮುಖಂಡರೆಲ್ಲರೂ ಸೇರಿ ಮಳೆ ಬರಲೆಂದು ಗಂಗೆಯ ಪೂಜೆಯನ್ನು ಮಾಡುವರು ಹಾಗೂ ಸಾಯಂಕಾಲದ ಸಮಯದಲ್ಲಿ ಗವಿಸಿದ್ದೇಶ್ವರ ಸ್ವಾಮಿಯ ಗುಡಿಗೆ ಹೋಗಿ ರಾತ್ರಿಯಲ್ಲಿ ಈ ರೀತಿಯಾಗಿ ಲಂಬಾಣಿಯರು ಕುಟುಂಬದೊಂದಿಗೆ ಸಹ ಭಾಗಿತ್ವದೊಂದಿಗೆ ಬೆರತು ಜೀವನ ನಡೆಸುತ್ತಾರೆ.

2) **ಶಿಕ್ಷಣ:-** ಬಳ್ಳಾರಿ ಜಿಲ್ಲೆಯ ಲಂಬಾಣಿಗಳ ಕುಟುಂಬಗಳಲ್ಲಿ ಬಡತನ ಹಚ್ಚಾಗಿ ಇದ್ದು, ಬಡತನದಿಂದ ಬದುಕಲು ಬವಣೆ ಪಡುತ್ತಿರುವುದರಿಂದ ತಂದೆ-ತಾಯಿಗಳು ಕೂಲಿ ಕೆಲಸಕ್ಕೆ ಹೊಗಬೇಕಾಗಿರುತ್ತದೆ. ಈ ರೀತಿ ಮಹಳೆಯರು ದುಡಿಯುವುದಕ್ಕೆ ಹೊಗುತ್ತಿದ್ದುದರಿಂದ ಮಕ್ಕಳಿಗೆ ಶಿಕ್ಷಣದ ಬಗ್ಗೆ ಮಹತ್ವವನ್ನು ತಿಳಿಸುತ್ತಿರಲ್ಲಿಲ್ಲ, ಮೇಲಾಗಿ ಮಹಿಳೆಯರಿಗೂ ಸಹ ಶಿಕ್ಷಣದ ಜ್ಞಾನ ಇರಲಿಲ್ಲ. ಬಳ್ಳಾರಿಯ ಸುತ್ತ-ಮುತ್ತ ಇರುವ ಗುಡ್ಡ ಬೆಟ್ಟಗಳ ಮಧ್ಯದಲ್ಲಿ ತಾಂಡಗಳ ಸಂಖ್ಯೆ ಹೆಚ್ಚಾಗಿರುವುದರಿಂದ, ಬಡತನದಿಂದ ಮುಕ್ತಿ ಹೊಂದಲು ಮಕ್ಕಳನ್ನು ಸಹ ಕೂಲಿ ಕೆಲಸಕ್ಕೆ ಕರೆದೊಯ್ಯುತ್ತಿದ್ದರು. ಲಂಬಾಣಿಗಳು ಶಿಕ್ಷಣ ಪಡೆಯದಿರಲು ಕಾರಣಗಳಿವೆ. ಮೊದಲಿಗೆ, ಅವರು ಅಲೆಮಾರಿಗಳಾಗಿದ್ದು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ವಂತ ಊರು ಬಿಟ್ಟು ಬೇರೆ ಊರುಗಳಿಗೆ ಕುಟುಂಬ ಪೂರ್ತಿ ವಲಸೆ ಹೊಗುತ್ತಿದ್ದರು, ಬಡತನ ಮತ್ತು ನಿರಾಸಕ್ತಿ ಹಾಗೂ ಇತರೆ ಸಾಮಾಜಿಕ ಕಾರಣಗಳಿಂದಾಗಿ ಮಕ್ಕಳು ಶಿಕ್ಷಣದಿಂದ ಹೊರಗುಳಿಯುತ್ತಿದ್ದರು. ಒಟ್ಟಿನಲ್ಲಿ ಲಂಬಾಣಿಯರು ಕಲಿಯಲು ಅವಕಾಶವನ್ನು ನೀಡದೇ ಅಲೆಮಾರಿ ಜೀವನವನ್ನು ನಡೆಸಿದ್ದರಿಂದ ಬಡತನ,ನಿರಾಸಕ್ತಿ,ಇತರೆ ಆರ್ಥಿಕ ಕಾರಣಗಳಿಂದಾಗಿ ಅವರ ಮಕ್ಕಳು ಶಿಕ್ಷಣ ಸಂಸ್ಥೆಗಳಿಂದ ಹೊರಗುಳಿದಿದ್ದಾರೆ. ಲಂಬಾಣಿ ಮಕ್ಕಳು ಎದುರಿಸುತ್ತಿರುವ ಮತ್ತೊಂದು ಸವಾಲು ಶಾಲೆಗಳಲ್ಲಿನ ಬೋಧನಾ ಮಾಧ್ಯಮಕ್ಕೆ ಸಂಬಂಧಿಸಿದೆ. ಈ ಮಕ್ಕಳು ಲಂಬಾಣಿ ಭಾಷಯೆನ್ನು ಮಾತನಾಡುತ್ತಾರೆ. ಆದರೆ ಶಾಲೆಗಳಲ್ಲಿ ಬೋಧನಾ ಮಾಧ್ಯಮವು ಕನ್ನಡವಾಗಿರುತ್ತದೆ. ಆದ್ದರಿಂದ ಆರಂಭಿಕ ಶ್ರೇಣಿಗಳಲ್ಲಿರುವಾಗ ಅವರು ಕನ್ನಡದಲ್ಲಿ ಪಾಠಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಮಸ್ಯೆಗಳನು ಹೊಂದಿದ್ದಾರೆ. ಅವರು ಅದನ್ನು ಮಾಡಲು ಪ್ರಾರಂಭಿಸುವ ಹೊತ್ತಿಗೆ, ಅವರು ಈಗಾಗಲೇ ಶಾಲೆಯಲ್ಲಿ ಕನಿಷ್ಟ ಎರಡು ವರ್ಷಗಳನ್ನು ಪೂರೈಸಿದ್ದಾರೆ. ಇದು ಕಲಿಕೆಯಲ್ಲಿ ಅವರ ಸಂಕಟಗಳನ್ನು ಹೆಚ್ಚಿಸುತ್ತದೆ.

3) **ಆರೋಗ್ಯ:-** ಲಂಬಾಣಿ ತಾಂಡಗಳಲ್ಲಿ ಮಹಿಳೆ ಮತ್ತು ಮಕ್ಕಳಲ್ಲಿ ಸ್ವಚ್ಛತೆಯ ಜ್ಞಾನ ಇರುವುದಿಲ್ಲ, ಚರಂಡಿಯಲ್ಲಿ ನಿಲ್ಲುವ ನೀರು ಅದರ ಜೊತೆಗೆ ಶೌಚಾಲಯದ ನೀರು ಹಾಗೂ ಕಲುಷಿತ ನೀರುಗಳು ಸರಿಯಾದ ಮಾರ್ಗದಲ್ಲಿ ಹರಿದು ಹೋಗುವುದಿಲ,ಅಲ್ಲಲ್ಲಿ ಮನೆಯ ಮುಂದೆ ಸಣ್ಣ-ಸಣ್ಣ ಗುಂಡಿಗಳಾಗಿ ಅದರಲ್ಲಿ ಕಲುಷಿತ ನೀರು ನಿಂತಿರುತ್ತದೆ. ಸೊಳ್ಳೆ, ನೊಣಗಳು ಹೆಚ್ಚಾಗಿ ಮನೆಗಳಲ್ಲಿ ಕಂಡು ಬರುತ್ತವೆ. ಆಹಾರವನ್ನು ಸೇವಿಸುವುದರಿಂದ ಮಕ್ಕಳಲ್ಲಿ ಬೇಗನೆ ಖಾಯಿಲೆ ಕಾಣಿಸಿಕೊಳ್ಳುತ್ತದೆ. ಜೊತೆಗೆ ಸಾಮಾನ್ಯ ಜನರಿಗೂ ಆರೋಗ್ಯದ ತೊಂದರೆ ಕಂಡು ಬಂದಲ್ಲಿ ತೋರಿಸಿಕೊಳ್ಳುವುದಕ್ಕೂ ಲಂಬಾಣಿ ತಾಂಡಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಂದಿಗೂ ಇರುವುದಿಲ್ಲ. ಸಣ್ಣ-ಪುಟ್ಟ ಖಾಯಿಲೆಗೂ ಸುಮಾರು 6-8 ಕಿ.ಮೀ ದೂರದ ಗ್ರಾಮಗಳಿಗೆ ಹೋಗಬೇಕಾಗುತ್ತದೆ. ದೊಡ್ಡ ದೊಡ್ಡ ಖಾಯಿಲೆಗೆ ತುರ್ತು ಚಿಕಿತ್ಸೆ ಅವಶ್ಯಕತೆ ಇದ್ದಾಗ ಎಷ್ಟೇ ದೂರವಾದರೂ ಬದಕುವ ಆಸೆಯಿಂದ ನಗರ ಪ್ರದೇಶಗಳಿಗೆ ಹೋಗಲೇ ಬೇಕು. ಇತ್ತೀಚಿನ ಕಾಲಮಾನದಲ್ಲಿ 100 ವರ್ಷಗಳಿಗೊಮ್ಮೆ ಹೊಸ ಹೊಸ ರೋಗ-ರುಜಿನಗಳು ಹೊಸ ರೂಪಾಂತರಗೊಂಡು 2020-21ರಲ್ಲಿ ಕೊರೋನಾ ಎನ್ನುವ ಹೆಮ್ಮಾರಿಯ ಖಾಯಿಲೆಗೆ ತುತ್ತಾಗಿ ಬಹಳ ಸಾವುಗಳನ್ನು ನೋಡುತ್ತಿದ್ದೇವೆ. ಈ ಖಾಯಿಲೆಯು ಬರೀ ಉಸಿರಾಟದಿಂದ ಬಂದು ತೊಂದರೆ ಕೊಡುತ್ತಿದೆ. ಎಲ್ಲಾ ವರ್ಗದ ಜನರು ಭಯದಿಂದ ಕದ್ದು-ಮುಚ್ಚಿ ಹೊರಗೆ ಬಂದರೆ ರೋಗದ ಭಯ ಎದ್ದು ಕಾಣುತ್ತಿದೆ. ಒಬ್ಬರಿಗೊಬ್ಬರು ಒಡನಾಟ ಇಲ್ಲದೆ ಸಂಬಂಧಗಳು ಕೆಟ್ಟು ಹೋಗುತ್ತೀವೆ. ಹಾಗೂ ಸಾವು-ನೋವಿನಲ್ಲೂ ಯಾರು ಬರದಂತೆ ಆಗಿದೆ. ಇಂತಹ ಘೋರವಾದ ಖಾಯಿಲೆಯಿಂದ ಮನುಷ್ಯರಲ್ಲಿ ನಗುವೇ ಇಲ್ಲದಂತಾಗಿದೆ. ಇಂತಹ ಖಾಯಿಲೆಯು ಅಪರೂಪವಾಗಿ ಶತಕಗಳನ್ನು ದಾಟಿ ಬರುತ್ತಿರಬಹುದು ಎಂದು ನಮ್ಮ ತಲೆಮಾರಿಗಿಂತ ಹಿಂದಿನ ತಲೆಮಾರಿನವರು ಹೇಳುತ್ತಿದ್ದಾರೆ.

4) **ಕುಟುಂಬ:-** ಬಳ್ಳಾರಿ ಜಿಲ್ಲೆಯ ಲಂಬಾಣಿಯರ ಕುಟುಂಬದಲ್ಲಿ,ಚಿಕ್ಕ-ಕುಟುಂಬ ಮತ್ತು ದೊಡ್ಡ ಕುಟುಂಬಗಳು ಜೊತೆಗೆ ಸಹ-ಕುಟುಂಬಗಳು ಇರುತ್ತವೆ. ಚಿಕ್ಕ ಕುಟುಂಬದಲ್ಲಿ ವಾಸ ಮಾಡುವವರು ತಂದೆ-ತಾಯಿ ಗಂಡ-ಹೆಂಡತಿ ಮತ್ತು ಮಕ್ಕಳು. ದೊಡ್ಡ ಕುಟುಂಬದಲ್ಲಿ ತಂದೆ-ತಾಯಿ,ಅಣ್ಣ-ತಮ್ಮ ಚಿಕ್ಕಪ್ಪ-ದೊಡ್ಡಪ್ಪ ಈ ರೀತಿಯ ಕುಟುಂಬ ಇರುತ್ತದೆ ಸಹ ಕುಟುಂಬದಲ್ಲಿ ಕುಟುಂಬ ಸದಸ್ಯರ ಜೊತೆಯಲ್ಲಿ ಕುಟುಂಬದ ಯಜಮಾನನ ಅತ್ತೆ-ಮಾವ ಅವರ ಮಕ್ಕಳು ಜೊತೆಯಾಗಿ ಬಾಳುತ್ತಾರೆ. ಚಿಕ್ಕ ಕುಟುಂಬ ಸದಸ್ಯರು ದುಡಿಯುವುದಕ್ಕಾಗಿ ಊರಿಂದ ಊರಿಗೆ ವಲಸೆ ಹೋಗುತ್ತಿದ್ದು,ಕೂಲಿ ಕೆಲಸ,ಗೋಡೆ ಕೆಲಸಕ್ಕೆ ನಾನಾ ರೀತಿಯ ಕಸುಬುಗಳನ್ನು ಮಾಡುತ್ತಿದ್ದರು. ನಮ್ಮದೇ ಸ್ವಂತ ನೆಲದಲ್ಲಿಯೇ ಕೃಷಿ ಚಟುವಟಿಕೆಗಳನ್ನು ಹಾಗೂ ದನ-ಕರು,ಮೇಕೆ,ಕೋಳಿ ಈ ರೀತಿಯ ಸಾಕುತ್ತ ಇಲ್ಲಿಯೇ ಇರುವುದಾಗಿ ತಿಳಿಸುತ್ತಾರೆ.

5) **ಆಹಾರ ಪದ್ಧತಿ:-** ಲಂಬಾಣಿಗಳ ಜನರ ಸಾಂಪ್ರದಾಯಕ ಆಹಾರವೆಂದರೆ ದಲಿಯ(ಅನ್ನ) ಬೋಟಿ (ಮಾಂಸ) ಬಾಟಿ (ರೊಟ್ಟಿ) ಸಲೋಯಿ (ಮೇಕೆಯ ರಕ್ತದಿಂದ ತಯಾರಿಸುವುದು) ಘುಗ್ಗರಿ (ಬೇಯಿಸಿದ ಕಾಳುಗಳು) ಬಾಜಿ(ಹೊಲದಲ್ಲಿ ಬೆಳೆಯುವ ಕಳೆ ಸೊಪ್ಪಿನಿಂದ ತಯಾರಿಸುವುದು) ಬಾಜರಿ(ಸಜ್ಜೆ) ರಾಗಿ, ನವಣೆ, ಸಾವೆ, ಅಂಬಲಿ (ಜೋಳದ

ನುಚ್ಚಿನಿಂದ ಮಾಡುವುದು) ಹೊರತುಪಡಿಸಿ, ಕೋಳಿ, ಕುರಿ, ಮೇಕೆ, ಜೊತೆಗೆ ಕಾಡಿನಲ್ಲಿ ಭೇಟೆಯಾಡುವ ಮೊಲ, ಕಾಡುಹಂದಿ ಕೌಜುಗ,ಚಿಕ್ಕ ಪುಟ್ಟ ಹಕ್ಕಿ ಉಡ ಇತ್ಯಾದಿ, ಹಾಗೆಯೇ ಕೆರೆ ಹಳ್ಳ ಕೊಳ್ಳಗಳಲ್ಲಿ ಏಡಿ,ಮೀನುಗಳನ್ನು ಹಿಡಿದು ತಂದು ಈ ರೀತಿಯ ಆಹಾರಗಳನ್ನು ಉಪಯೋಗಿಸುತ್ತಿದ್ದರು. ತದನಂತರ ಹೊಸ ತಂತ್ರ ಜ್ಞಾನದಂತೆ ಅಕ್ಕಿ, ದ್ವಿದಳ ಧಾನ್ಯ ಮತ್ತು ನವ ನವೀನ ಆಹಾರದ ಉಪಯೋಗಗಳನ್ನು ಕಲಿತು ಬಳಕೆ ಮಾಡುತ್ತಿದ್ದಾರೆ. ಭೌಗೋಳಿಕ ಪರಿಸರದಿಂದ ಗದ್ದೆಗಳಲ್ಲಿ ಬೆಳೆಯುವ ಕಬ್ಬು, ತೆಂಗು, ಭತ್ತ ಹಾಗೂ ತೋಟಗಳಲ್ಲಿ ಬೆಳೆಯುವ ಹೂ–ಹಣ್ಣುಗಳು, ಎಲೆ,ಬಾಳೆ ಮೊದಲಾದವುಗಳನ್ನು ಉಲ್ಲೇಖಿಸ ಬಹುದು.ಲಂಬಾಣಿಗರು ಗೋ ಪ್ರಿಯಾರಾಗಿದ್ದು, ಹಸುಗಳನ್ನು ಹೇರಳವಾಗಿ ಸಾಕುತ್ತಾರೆ. ಇದರ ಮೂಲಕ ಹಾಲು, ಮೊಸರನ್ನು ಹೇರಳವಾಗಿ ಬಳಸುವುದರ ಜೊತೆಗೆ ತುಪ್ಪವನ್ನು ದಿನನಿತ್ಯದ ಊಟದ ಜೊತೆಗೆ, ಹಾಗೂ ದೀಪಾವಳಿ ಹಬ್ಬದಲ್ಲಿ ಸಿಹಿಮುದ್ದೆ(ಹಿಟಕಾ)ಯ ಜೊತೆಗೆ ಹೇರಳವಾಗಿ ಬಳಸುತ್ತಾರೆ.

***ಆಕರ ಗ್ರಂಥಗಳು:**


1. ಡಾ: ಸಿ.ಆರ್. ಗೋಪಾಲ್, ಕೃತಿ–ಉತ್ಕ್ರಾಂತಿಯತ್ತ ಲಂಬಾಣಿಗಳು, 2010ನೇ ವರ್ಷ, ಐಬಿಎಚ್ ಪ್ರಕಾಶನ,77/2ನೇ ಮುಖ್ಯರಸ್ತೆ, ರಾಮರಾವ್ ಲೇಔಟ್, ಬಿಎಸ್‌ಕೆ 3ನೇ ಸ್ಟೇಜ್, ಬೆಂಗಳೂರು–560085.
2. ಡಾ: ತಾರಿಹಳ್ಳಿ ಹನುಮಂತಪ್ಪ, ಕರ್ನಾಟಕದ ಬುಡಕಟ್ಟು ಸಮುದಾಯಗಳು,2010ನೇ ವರ್ಷ, ಪ್ರಗತಿ ಪ್ರಿಂಟ್ ಕಮ್ಯೂನಿಕೇಶನ್ಸ್, ಬೆಂಗಳೂರು.
3. ಡಾ: ಚಾ.ನಾ ಯಶವಂತ ಕುಮಾರ್, ಬುಡಕಟ್ಟು ಚಹರೆ, 2017ನೇ ವರ್ಷ,ಕಮಲ ಇಂಪ್ರೇಸ್ಸೆಷನ್ ಮೈಸೂರು.
4. ಡಾ: ಸ.ಚಿ. ರಮೇಶ್, ಅಲೆಮಾರಿಗಳ ಸ್ಥಿತಿಗತಿ,2005ನೇ ವರ್ಷ,ಪ್ರಿಂಟ್ ಪಾರ್ಕ್,ಬೆಂಗಳೂರು
5. ಹರಿಶ್ಚಂದ್ರ ದಿಗ್ಸಂಗಿಕರ್,ಕನ್ನಡಿಗರ ಗೋವೆ ವಲಸೆ,1999ನೇ ವರ್ಷ,ಸತ್ಯಶ್ರೀ ಪ್ರಿಂಟರ್ಸ್ ಜೆ.ವಿ.ಬೆಂಗಳೂರು.
6. ಡಾ: ಶೇಖರ್ ನಾಯ್ಕ್, ಕರ್ನಾಟಕದ ಲಂಬಾಣಿಗಳು ಇತಿಹಾಸ ಮತ್ತು ಸಂಸ್ಕೃತಿ,2002ನೇ ವರ್ಷ, ದಿನಕರ ಪ್ರಕಾಶನ, ನಾಗರಬಾವಿ, ಬೆಂಗಳೂರು.
7. ರಮೇಶ ಶಂಕರ ಚವ್ಹಾಣ, ಕರ್ನಾಟಕದ ಲಂಬಾಣಿ ವೃತ್ತಿಗಾಯಕರು, ಶ್ರೀ. ಅನ್ನದಾನಿ ಭೈರವ ಪ್ರಕಾಶನ #15, 6ನೇ ಕ್ರಾಸ್, ಧನ್ವಂತರ ನಿಲಯ, ಕೊಟ್ಟಿಗೇಪಾಳ್ಯ, ವಿಶ್ವನೀಡಂ ಅಂಚೆ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು.
8. ಡಾ: ವೆಂಕಟೇಶ್, ಬುಡಕಟ್ಟುಗಳ ಸಾಮಾಜಿಕ ಬದಲಾವಣೆ,ಶ್ರೀ.ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, #133, ಭಾರತೀಪುರ, ಸೋಂಪುರ ಹೋಬಳಿ, ನೆಲಮಂಗಳ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ,